ಅಧ್ಯಕ್ಷರು : ಮಾನ್ಯ ಕಂದಾಯ ಮಂತ್ರಿಗಳು, ಮಧ್ಯಾಹ್ನ ತಾವು ನಿಲುವಳಿ ಸೂಚನೆಗೆ ಉತ್ತರ ಕೊಡುವ ಮುನ್ನ ವಿವರವಾಗಿ ಹೇಳಿ, ಈಗ ನಾಗಮಾರಪಳ್ಳಿಯವರಿಗೆ ತಮ್ಮ ಉತ್ತರವನ್ನು ಹೇಳಿ.

ಶ್ರೀ ಧರ್ಮಸಿಂಗ್ : ಈಗಾಗಲೇ 27 ಕೋಟಿ ರೂಪಾಯಿ ಇದೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಆದರೆ 1993-94 ರಲ್ಲಿ ಈಗಾಗಲೇ ನಾವು 17 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆ. ಅದರಲ್ಲಿ ಈಗ ಬಾಕಿ 7 ಅಥವಾ 8 ಕೋಟಿ ರೂಪಾಯಿ ಇದೆ. ನಮ್ಮ ರಾಜ್ಯ ಬೊಕ್ಕಸದಿಂದಲೂ ಸಹ ಹಣವನ್ನು ಬಿಡುಗಡೆ ಮಾಡಿದ್ದೇವೆ. ಒಂದು ಕೋಟಿ ರೂಪಾಯಿ ಬಗ್ಗೆ ಏನೂ ಅನುಮಾನ ಪಡತಕ್ಕದ್ದಲ್ಲ. ನಾವು ಈಗಾಗಲೇ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಆ ಒಂದು ಆದೇಶ ತಲುಪುವುದರಲ್ಲಿ ಸ್ವಲ್ಪ ತಡ ಆಗಿರಬಹುದು. And that order will goo to the Deputy Commissioner. ಡೆಪ್ಯುಟಿ ಕಮೀಷನರ್‌ಗೆ ನಾವು ಅಲ್ಲೇ ಹೇಳಿದ್ದೇವೆ.

SRI R.V. DESHAPANDE : Will the Deputy Coommissioner pass an order without your order?

ಶ್ರೀ ಧರ್ಮಸಿಂಗ್ : ದೇಶಪಾಂಡೆಯವರೇ, ಡೆಪ್ಯೂಟಿ ಕಮಿಷನರ್‌ರವರಿಗೆ ಫ್ಲಡ್ ಬಗ್ಗೆಯಾಗಲೀ....

ಶ್ರೀ ಆರ್.ವಿ ದೇಶಪಾಂಡೆ : ಸ್ವಲ್ಪ ಕೇಳಿ. ನೀವು ಇನ್ನು 2-3 ತಿಂಗಳ ಬಾದಷಾಗಳು. ನಿಮ್ಮ ಮಾತಿನಮೇಲೆ ಜಿಲ್ಲಾಧಿಕಾರಿಗಳು ಆರ್ಡರ್ ಮಾಡುತ್ತಾರೆಯೇ? ನೀವು ಆರ್ಡರ್ ಕೊಟ್ಟರೆ ಅವರು ಮಾಡುತ್ತಾರೆ.

ಶ್ರೀ ಧರ್ಮಸಿಂಗ್ : ಜಿಲ್ಲಾಧಿಕಾರಿಗಳೇ ಅವಾಯ್ಲಬಲ್ ಫಂಡ್ನಿಂದ ಖರ್ಚು ಮಾಡತಕ್ಕಂಥದ್ದು, ನೀವು ಸರ್ಕಾರದ ಆಜ್ಞೆಗೆ ಕಾಯಬೇಕಾಗಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದೇವೆ. ಮಾನ್ಯ ಯಡಿಯೂರಪ್ಪನವರು ಎಲ್ಲಾ 72 ತಾಲ್ಲೂಕುಗಳನ್ನು ಬಲಗಾಲ ಪ್ರದೇಶ ಎಂದು ಸಾರಬೇಕು ಎಂದು ಹೇಳಿದ್ದಾರೆ. ಮುಂದೆ ಬರುವ ಚರ್ಚೆಯಲ್ಲಿ ನಾನು ಅದರ ಬಗ್ಗೆ ಹೇಳುತ್ತೇನೆ.

ಬೇಲೂರು ಪಟ್ಟಣದಲ್ಲಿ ಮನೆಗಳ ನಿರ್ಮಾಣ

14 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಲೂರು ಪಟ್ಟಣದಲ್ಲಿ ಮನೆಗಳನ್ನು ಕಟ್ಟಲು ಗೃಹ ಮಂಡಳಿಯವರು ಅರ್ಜಿದಾರರಿಂದ ಮುಂಗಡ ಹಣ ಕಟ್ಟಿಸಿ ಕೊಂಡಿರುವುದು ನಿಜವೇ? ಯಾವ ವರ್ಷ ಹಣ ಕಟ್ಟಿಸಿಕೊಳ್ಳಲಾಯಿತು? ಂ

ಆ) ಈವರೆಗೆ ಗೃಹ ನಿರ್ಮಾಣ ಮಾಡದಿರಲು ಕಾರಣವೇನು? ಮತ್ತು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಗೋಪಿನಾಥ್ ಆರ್. ಸಾಂಡ್ರಾ (ವಸತಿ ಸಚಿವರು) :

ಅ) ಕರ್ನಾಟಕ ಗೃಹ ಮಂಡಳಿಯು 1984 ರಲ್ಲಿ ಮನೆಗಳ ಬೇಡಿಕೆ ಸಮೀಕ್ಷೆ ನಡೆಸಲಾಗಿದ್ದು ಅರ್ಜಿಯೊಂದಿಗೆ ನೋಂದಣಿ ಹಣವನ್ನು ಪಡೆಯಲಾಗಿದೆ. ಇದರ ಮೊತ್ತ ರೂ. 53,900-00

ಆ) ಬೇಲೂರು ಪಟ್ಟಣದಲ್ಲಿ ವಸತಿ ಯೋಜನೆಗಾಗಿ 6 ಎಕರೆ 27 ಗುಂಟೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ಕ್ರಮ ಜರುಗಿಸಲಾಗಿದೆ. ಆದರೆ, ಕರ್ನಾಟಕ ಉಚ್ಚ ನ್ಯಾಯಾಲಯದವರು ತಡೆಯಾಜ್ಞೆ ನೀಡಿದ್ದರಿಂದ ಭೂ ಸ್ವಾಧೀನ ಪ್ರಕರಣವನ್ನು ಇತ್ಯರ್ಥಗೊಳಿಸಲಾಗಿಲ್ಲ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಮಾನ್ಯ ಅಧ್ಯಕ್ಷರೇ, 1984ರಲ್ಲಿ ಸಮೀಕ್ಷೆ ನಡೆಸಿ ಅರ್ಜಿಯೊಂದಿಗೆ ನೋಂದಣಿ ಹಣ ರೂ. 53,900-00 ಪಡೆಯಲಾಗಿದೆ ಎಂದು, ಹೇಳಿದ್ದೀರಿ. ಎರಡನೆಯ ಪ್ರಶ್ನೆಗೆ ಉತ್ತರವಾಗಿ, - ಕರ್ನಾಟಕ ಉಚ್ಚ ನ್ಯಾಯಾಲಯದವರು ತಡೆಯಾಜ್ಞೆ ನೀಡಿದ್ದರಿಂದ ಭೂ ಸ್ವಾಧೀನ ಪ್ರಕರಣವನ್ನು ಇತ್ಯರ್ಥಗೊಳಿಸಲಾಗಿಲ್ಲ ಎಂದು ತಿಳಿಸಿದ್ದೀರಿ. ಸ್ವಾಮಿ, ತಮ್ಮ ಸರ್ಕಾರ ತೂಕಡಿಸುತ್ತಿದೆಯೇ ಎಂದು ನಾನು ಕೇಳುತ್ತೇನೆ. 1984ರಿಂದ 1994ರ ವರೆಗೆ 10 ವರ್ಷಗಳಲ್ಲಿ ತಡೆಯಾಜ್ಞೆಯನ್ನು ತೆಗೆಸುವುದಕ್ಕೆ ಆಗದೇ ಇದ್ದರೆ ಇನ್ನುಯಾವ ಕಾಲಕ್ಕೆ ತಾವು ಮನೆಗಳನ್ನು ಕಟ್ಟುತ್ತೀರಿ?

ಶ್ರೀ ಗೋಪೀನಾಥ್ ಆರ್. ಸಾಂಡ್ರ : ಮಾನ್ಯ ಸಭಾಪತಿಯವರೇ, 1984ರಲ್ಲಿ ಸಮೀಕ್ಷೆ ಮಾಡಲಾಯಿತು. ನಂತರ ಇ.ಡಬ್ಲ್ಯು.ಎಸ್.ನ 29, ಎಲ್.ಐ.ಜಿ.ನ 30 ಮನೆಗಳು, ಎಂ.ಐ.ಜಿ.ಯ 32 ಹಾಗೂ ಹೆಚ್.ಐ.ಜಿ.ಯ 2 ಮನೆಗಳನ್ನು ಮಾಡುವುದಕ್ಕೆ ಕಾರ್ಯಕ್ರಮ ಹಾಕಲಾಯಿತು. ಆನಂತರ ನಮಗೆ ಅವರಿಂದ 53,900 ರೂಪಾಯಿಗಳು ಮುಂಗಡವಾಗಿ ಹಣ ಬಂತು. 12 ಎಕರೆ 24 ಗುಂಡೇ ಜಮೀನಿನಲ್ಲಿ ಈ ಕಟ್ಟಡಗಳಿಗೆ ಸರ್ವೇ ಮಾಡಿ ಅದನ್ನು ಅಕ್ವಿಸಿಷನ್ ಮಾಡಿದೆವು. ಅಕ್ವಿಸಿಷನ್ ಮಾಡಿದ ನಂತರ ಭೂಮಾಲೀಕರು ಹೈಕೋರ್ಟಿಗೆ ಹೋಗಿ ಸ್ಟೇ ಆರ್ಡರ್ ತೆಗೆದುಕೊಂಡು ಬಂದರು. ಇದಕ್ಕೂ ಮೊದಲೂ 6 ಎಕರೆ ಜಮೀನನ್ನು ಅಂದಿನ ಅನಿಸ್ಟೆಂಟ್ ಕಮೀಷನರ್ ಅವರು ಅದು ಹರಿಜನರಿಗಾಗಿ ಮೀಸಲಾಗಿಟ್ಟಿದ್ದ ಜಮೀನು ಇದರಲ್ಲಿ ಬೇರೆ ಮಾಡುವುದಕ್ಕೆ ಬರುವುದಿಲ್ಲ ಎಂದು 6 ಎಕರೆಯನ್ನು ತೆಗೆದುಕೊಂಡರು. ಈ 6 ಎಕರೆ ಹೋದಮೇಲೆ ಮಿಕ್ಕ 6 ಎಕರೆಗೆ ಅವರು ಹೈಕೋರ್ಟ್‌ನಲ್ಲಿ ಸ್ಟೇ ತೆಗೆದುಕೊಂಡು ಬಂದಿದ್ದಾರೆ. ಆದಷ್ಟು ಸ್ಟೇ ವೆಕೇಟ್ ಮಾಡಬೇಕೆಂದು ನಮ್ಮ ಅಡ್ವೊಕೇಟ್ ಜನರಲ್‌ರವರಿಗೆ ಈಗಾಗಲೇ ತಿಳಿಸಿದ್ದೇವೆ. ನಾವೂ ಕೂಡ ಬಹಳಷ್ಟು ಪ್ರಯತ್ನ ಮಾಡುತ್ತಾ ಇದ್ದೇವೆ, ಆದರೂ ಕೂಡ ಇನ್ನೂ ಸ್ಟೇ ವೇಕೆಟ್ ಆಗಿಲ್ಲ. ನಮ್ಮ ಪ್ರಯತ್ನ ಸರಾಗವಾಗಿ ಸಾಗಿದೆ. ಆದಷ್ಟು ಹೈಕೋರ್ಟ್‌ನವರನ್ನು ಮನವೊಲಿಸಿ, ವೆಕೇಟ್ ಮಾಡಿಸಿಕೊಡುತ್ತೇವೆ. ಇದಲ್ಲದೆ, ಅಕಸ್ಮಾತ್ತಾಗಿ ಅವರು ಟಾಸ್ಕ್ ಫೋರ್ಸ ಕಮಿಟಿ ಚೇರ್ಮನ್ ಆಗಿದ್ದಾರೆ. ಅವರು ಮನಸ್ಸು ಮಾಡಿದರೆ, ನೆಗೋಷಿಯೇಷನ್ ಮೇಲೆ, ಲ್ಯಾಂಡ್ಸ್‌ಗಳನ್ನು ಕೊಡಿಸಿದರೆ, ನಾವು ಹಣ ಕೊಟ್ಟು, ಅದನ್ನು ತೆಗೆದುಕೊಳ್ಳುವುದಕ್ಕೆ ತಯಾರಿದ್ದೇವೆ. ಅವರು, ಆ ದಿಸೆಯಲ್ಲಿ ಪ್ರಯತ್ನ ಮಾಡಿ, ನಮಗೆ ಸಲಹೆ ಮಾಡಿದರೆ ಆ ರೀತಿಯಿಂದ ನಡೆದುಕೊಳ್ಳುತ್ತೇವೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಮಾನ್ಯ ಅಧ್ಯಕ್ಷರೇ, ತಡೆಯಾಜ್ಞೆ ಯಾವಾಗಿ ಬಂತು? ತಡೆಯಾಜ್ಞೆ ಬಂದ ಮೇಲೆ, ಗವರ್ನಮೆಂಟ್ ಅಡ್ವೊಕೇಟ್ಸ್ ಇಲ್ಲವೇ? ಅಡ್ವೊಕೇಟ್ ಜನರಲ್ ಇಲ್ಲವೇ? 10 ವರ್ಷ ನಿಲ್ಲುವುದಕ್ಕೆ ಕಾರಣವೇನು? ತಡೆಯಾಜ್ಞೆ ತೆಗೆಸುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಗೋಪಿನಾಥ್ ಆರ್. ಸಾಂಡ್ರಾ : 3-4-90ರಲ್ಲಿ ತಡೆಯಾಜ್ಞೆ ಬಂದಿದೆ; ಅದಕ್ಕಾಗಿ, ನಾನು ಆಗಲೇ ಹೇಳಿದಂತೆ ಆದಷ್ಟು ಬೇಗನೆ ವೆಕೇಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಹೈಕೋರ್ಟನ್ನು ಒತ್ತಾಯ ಮಾಡುವುದಕ್ಕಾಗುವುದಿಲ್ಲ. ಅದು ತಮಗೂ ತಿಳಿದಿದೆ. ನಾನು ಅದಕ್ಕೇ ಹೇಳಿದೆ. ನೆಗೋಷಿಯೇಷನ್ ಮೇಲೆ, ಆ ಭೂಮಿಯನ್ನು ಇವರಿಗೆ ಕೊಡಬೇಕೆಂದು ಪ್ರಯತ್ನ ಮಾಡಿದರೆ, ನಿಮಗೆ ಎಲ್ಲಾ ಅನುಕೂಲತೆಗಳನ್ನು ಮಾಡಿಕೊಡುತ್ತೇವೆ.

ಬೆಳಗಾವಿ ಜಿಲ್ಲೆಯಲ್ಲಿ ಅತಿವೃಷ್ಟಿ ಹಾಗೂ ಅನಾವೃಷ್ಟಿಯಿಂದ ಆದ ಹಾನಿ

312 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?